ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಬಾಗೇಪಲ್ಲಿ

C.C. 264/2020 CW: 1 P.W. 1

| | |
|---|---|
| ಸಾಕ್ಷಿದಾರರ ಹೆಸರು | ಃ ರೆಡ್ಡಪ್ಪ |
| ತಂದೆ/ಗಂಡನ ಹೆಸರು | ಃ ವೆಂಕಟರಾಯಪ್ಪ |
| ವಯಸ್ಸು | ಃ 60 ವರ್ಷ |
| ವೃತ್ತಿ | ಃ ವ್ಯವಸಾಯ |
| ವಾಸಸ್ಥಳ | ಃ ಇದ್ದಿಲವಾರಪಲ್ಲಿ |

**ಪ್ರಮಾಣೀಕರಿಸಲಾದ ದಿಃ 29.12.2023**

**ಮುಖ್ಯ ವಿಚಾರಣೆ ಃಃ ಸಸಅ ರವರಿಂದಃ**

ಚಾಸಾ 2 ನನ್ನ ಅಕ್ಕ. 2019 ರಂದು ಬೆಲ್ಲಾಲಂಪಲ್ಲಿಯ ಸ. ನಂ. 19/20 ನಲ್ಲಿ ಚಾಸಾ 2 ರವರು ಕೆಲಸ ಮಾಡುತ್ತಿದ್ದಾಗ ಅಲ್ಲಿ ಆರೋಪಿಗಳು ಬಂದು, ಗಲಾಟೆ ಮಾಡಿ, ಅವ್ಯಾಚ್ಚ ಶಬ್ದಗಳಿಂದ ನಿಂದಿಸಿ, ಮುಚ್ಚಿನಿಂದ 1 ನೇ ಆರೋಪಿಯು ಚಾಸಾ 1 ರವರಿಗೆ ಎಡಗೈ ಮತ್ತು ಎಡಕೈ ಹೊಡೆದರು. ಉಳಿದ ಆರೋಪಿಗಳು ಚಾಸಾ 2 ರವರನ್ನು ಹಿಡಿದು ಎಳೆದಾಡಿ ಅವ್ಯಾಚ್ಚ ಶಬ್ದಗಳಿಂದ ಬೈದಿರುತ್ತಾರೆ. ಜಗಳ ಬಿಡಿಸಲು ಹೋದ ನನಗೆ ಬೈದಿರುತ್ತಾರೆ.

2. ನಂತರ ಚಾಸಾ 2 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಈ ಬಗ್ಗೆ ದೂರು ನೀಡಿದ್ದೇನೆ. ದೂರನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ನಂತರ ಪೋಲೀಸರು ಸ್ಥಳಕ್ಕೆ ಪೋಲೀಸರು ಬಂದು, ಪಂಚನಾಮೆ ತಯಾರಿಸಿರುತ್ತಾರೆ. ಪಂಚನಾಮೆಯನ್ನು ನಿಪಿ 2 ಎಂದು ಸಾಕ್ಷಿಯ ಸಹಿಯನ್ನು 2(ಎ) ಎಂದು ಗುರುತಿಸಲಾಯಿತು. ನನ್ನ ಜೊತೆ ಪಂಚನಾಮೆ ಚಾಸಾ 3 ಮತ್ತು 4 ರವರು ಸಹಿ ಮಾಡಿರುತ್ತಾರೆ. ಸ್ಥಳದಿಂದ ಪೋಲೀಸರು ಮಚ್ಚನ್ನು ಜಪ್ತು ಪಡಿಸಿಕೊಂಡು ಬಂದಿರುತ್ತಾರೆ. ಸಾಕ್ಷಿ ಅದನ್ನು ಗುರುತಿಸಿದ್ದು ಅದನ್ನು ಎಮ್ ಒ 1 ಎಂದು ಗುರುತಿಸಲಾಯಿತು.

ಆರೋಪಿಗಳನ್ನು  ನೋಡಿದರೆ ಗುರುತಿಸುತ್ತೇನೆ. ಈ ದಿನ 1 ನೇ ಆರೋಪಿ ಗೈರು ಇರುತ್ತಾರೆ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ** ಃ– ಆರ್. ಜೆ ರವರಿಂದ

ಆರೋಪಿಗಳು ಮತ್ತು ಚಾಸಾ 2 ರವರ ನಡುವೆ ಜಮೀನಿಗೆ ಸಂಬಂಧಿಸಿದಂತೆ ಈ ನ್ಯಾ. ದಲ್ಲಿ ದಾವೆ ನಡೆಯುತ್ತಿದೆ ಎಂದರೆ ಸರಿ. ಜಮೀನು ವಿಷಯಕ್ಕೆ ಸಂಬಂಧಿಸಿದಂತೆ ಆರೋಪಿಗಳು ಮತ್ತು ಚಾಸಾ 2 ರವರ ಜೊತೆ ವೈಮನಸ್ಸು ಇದೆ ಎಂದರೆ ಸರಿ. ಜಮೀನು ವಿವಾದಕ್ಕೆ ಸಂಬಂಧಿಸಿದಂತೆ ರಾಜಿ ಪಂಚಾಯಿತಿಗಳು ನಡೆದವು ಎಂದರೆ ಸರಿ.  ಸದರಿ ಜಮೀನಿನ ಬಳಿ ಉ– ಒಂದು ಸೀಟಿನ ಮನೆ ಇದೆ ಎಂದರೆ ಸರಿ.

2. ಮನೆ ಬಳಿ ಜನ ಇರುತ್ತಾರೆ ಎಂದರೆ ಆ ದಿನ ಇರಲಿಲ್ಲ. ಸದರಿ  ಜಮೀನಿನ ಪಕ್ಕ ಚಾಸಾ 4 ಮತ್ತು 5 ರವರ ಜಮೀನು ಇದೆ ಎಂದರೆ  ಸರಿ. ಚಾಸಾ 4 ಮತ್ತು 5 ರವರು ಅಲ್ಲಿ ಯಾವಾಗಲೂ ಕೆಲಸ ಮಾಡಿಕೊಂಡು ಇರುತ್ತಾರೆ ಎಂದರೆ   ಆ ದಿನ ಇರಲಿಲ್ಲ. ಚೇಳೂರಿನಲ್ಲಿ ಆಸ್ಪತ್ರೆ ಇದೆ ಎಂದರೆ ಸರಿ. ಪಾತಪಳ್ಯ ದಲ್ಲೂ ಕೂಡ ಸ. ಆಸ್ಪತ್ರೆ  ಇದೆ  ಎಂದರೆ ಸರಿ.

3. ಚಾಸಾ 2 ರವರ ಜೊತೆ ಆಸ್ಪತ್ರೆಯಲ್ಲಿ 2 ದಿನ ಇದ್ದೆ. ನಾನು ಬೆಂಗಳೂರಿಗೆ ಆಸ್ಪತ್ರೆಗೆ ಹೋಗಿಲ್ಲ.  ಶ್ರೀನಿವಾಸ ರವರು  ಚಾಸಾ 2 ರವರನ್ನು  ಬೆಂಗಳೂರಿಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ.  ಗಲಾಟೆ ನಡೆದಾಗ  ನಮ್ಮನ್ನು ಹೊರತು ಪಡಿಸಿ ಸುಮಾರು 5 ಜನ ಇದ್ದರು.  ಚಾಸಾ 2 ರವರ ಜಮೀನಿನಿಂದ 1 ವರೆ ಕಿ. ಮೀ ದೂರದಲ್ಲಿ ನನ್ನ ಜಮೀನು ಇದೆ. ಆ ದಿನ ನಾನು ನನ್ನ  ಜಮೀನಿನಲ್ಲಿ ಕೆಲಸ ಮಾಡುತ್ತಿದ್ದೆ.  ಸ. ನಂ. 20 ಆರೋಪಿಗೆ ಸೇರಿದ್ದು ಎಂದರೆ ಚಾಸಾ 2 ರವರು ಅರ್ಧ ಭಾಗದಲ್ಲಿ ಇದ್ದಾರೆ.

4. ಆ ದಿನ ಯಾವುದೇ ಗಲಾಟೆ ನಡೆದಿಲ್ಲ ಎಂದರೆ ಸರಿಯಲ್ಲ.  ನನಗೆ ಕನ್ನಡ ಓದಲು

ಬರೆಯಲು ಬರುವುದಿಲ್ಲ ಎಂದರೆ ಸರಿ. ದೂರಿನಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಪೋಲೀಸರು ನನಗೆ ಯಾವುದೇ ನೋಟೀಸ್ ನೀಡಿಲ್ಲ. ಊರಿನಿಂದ ಪೋಲೀಸರನ್ನು ಸ್ಥಳಕ್ಕೆ ನಾನೇ ಕರೆದುಕೊಂಡು ಹೋಗಿರುತ್ತಾರೆ. ಆ ದಿನ ಪೋಲೀಸರು ಸ್ಥಳಕ್ಕೆ ಬಂದಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಗೆ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಯಾವುದೇ ಮು. ಮಾಲನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮು. ಮಾಲಿನ ರೀತಿಯ ಮಚ್ಚು ಗಳು ಬೇರೆ ಕಡೆ ಸಿಗುತ್ತವೆ ಎಂದರೆ ಸರಿ. ಆರೋಪಿಗಳ ಜಮೀನನ್ನು ಚಾಸಾ 2 ರವರಿಗೆ ಕೊಡಿಸಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ ಆರೋಪಿಗಳ ಅವ್ಯಾಚ್ಚ ಶಬ್ದಗಳಿಂದ ಬೈದು, ಹಲ್ಲೆ ಮಾಡಿ ಜೀವ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇರುವುದಿಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಗಣಕೀಕರಣಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಜೆಎಂಎಫ್‌ಸಿ ., ಬಾಗೇಪಲ್ಲಿ